

ಅವನ ಅಪ್ಪ–ಅಮ್ಮನ ನಡುವೆ ನಡೆದ ಜಗಳ, ಕೊಲೆ ಎಲ್ಲ, ಎಲ್ಲಾ... ಅವನ ತಾಯಿಗೆ ಪಕ್ಕದ ಮನೆಯವನೊಂದಿಗೆ ಅಕ್ರಮ ಸಂಬಂಧವಿದ್ದದ್ದು, ಅದರ ವಾಸನೆ ಅವನಪ್ಪನಿಗೆ ಹೊಡೆದು ಆಗಾಗ್ಗೆ ಮನೆಯಲ್ಲಿ ಜಗಳ ನಡೆಯುತ್ತಿದ್ದದ್ದು, ಇವನು ಹುಟ್ಟಿದ ಮೇಲೆ ಇವನ ಲಕ್ಷಣದಿಂದಲೇ ವಿಚಾರ ಬಯಲಾದದ್ದು, ದಿನೇ ದಿನೇ ಆ ಆಕ್ರೋಶ ಮಡುಗಟ್ಟುತ್ತಾ ಹೋದದ್ದು, ಇವನು ಮೂರು ವರ್ಷದವನಿದ್ದಾಗ ಒಂದು ದಿನ ಆಕೆ ಪ್ರಿಯಕರನ ಜೊತೆಗಿದ್ದದ್ದನ್ನು ರಾತ್ರೋರಾತ್ರಿ ರೆಡ್‌ಹ್ಯಾಂಡಾಗಿ ಹಿಡಿದದ್ದು, ತಮ್ಮ ಗುಟ್ಟು ರಟ್ಟಾಯಿತೆಂದು ಅವರಿಬ್ಬರು ಸೇರಿ ಕೈಗೆ ಸಿಕ್ಕ ಕುಡುಗೋಲಿನಿಂದ ಇವನಪ್ಪನ ಮರ್ಮಾಂಗವನ್ನೇ ಕತ್ತರಿಸಿಹಾಕಿದ್ದು, ನಿಶೆಯಲ್ಲಿದ್ದ ಆತ ವಿಚಿತ್ರವಾಗಿ ಅರಚುತ್ತಿದ್ದಾಗ ಅವನ ಬಾಯಿಗೆ ಬಟ್ಟೆ ತುರುಕಿ ಸಾಯಿಸಿದ್ದು, ಹೆಣವನ್ನು ಸಾಗಿಸಲು ಹೋದಾಗ ಬಾಗಿಲಲ್ಲಿ ಅಡ್ಡನಿಂತಿದ್ದ ಲಾರಿಯಿಂದಾಗಿ ಸಾಧ್ಯವಾಗದೇ ಹೋದದ್ದು, ಇಬ್ಬರೂ ಸಿಕ್ಕಿಹಾಕಿಕೊಂಡು ಜೈಲಿಗೆ ಹೋದದ್ದು... ಎಲ್ಲ ಎಲ್ಲಾ ಹೇಳಿಬಿಟ್ಟೆ. ಇಷ್ಟೆಲ್ಲ ವಿಚಾರ ನನಗೆ ಹೇಗೆ ಗೊತ್ತಾಯಿತೆಂದು ಆಶ್ಚರ್ಯಚಕಿತರಾದ ಅವರ್‍ಯಾರೂ ತಲೆ ಎತ್ತಲಿಲ್ಲ...

ಮನೆಗೆ ಬಂದವಳಿಗೆ, ನಾನು ಹೇಳಿದ ಸತ್ಯದಿಂದ ಅವನಿಗೆ ತುಂಬ ಹರ್ಟ್ ಆಗಿರಬಹುದೆನ್ನಿಸಲಾರಂಭಿಸಿತು. ಹೋಗಿ ಕ್ಷಮೆ ಕೇಳಿಬಿಡಬೇಕೆನ್ನಿಸಿತು. ಮನೆಯವರಾರಿಗೂ ಹೇಳದೇ ಅವನ ಆಫೀಸಿನ ಬಳಿ ಹೋದೆ. ಎಂದಿನಂತೆ ಆಫೀಸಿನಲ್ಲಿ ಮರ್ಯಾದೆ ಹೋಗುತ್ತದೆಯೆಂದು ಕೆಳಗಿಳಿದು ಓಡಿಹೋದ. ನಾನೂ ಹಿಂಬಾಲಿಸಿದೆ. ‘ತಪ್ಪಾಯಿತು ರೀ... ನನ್ನನ್ನು ಕ್ಷಮಿಸಿ. ನನಗೆಲ್ಲಾ ಗೊತ್ತಿದ್ದರೂ ನಿಮ್ಮನ್ನು ಸಹಿಸಿಕೊಂಡಿದ್ದೆ. ಆದರೆ ನೀವು ನಮ್ಮ ಕುಟುಂಬದವರನ್ನೆಲ್ಲ ಹುಚ್ಚರೆಂದಾಗ ನನಗೆ ತಡೆದುಕೊಳ್ಳಲಾಗಲಿಲ್ಲ. ಸಾರಿ ರೀ...’ ಎಂದೆ. ಅಷ್ಟರಲ್ಲಿ ಪಾರ್ಕಿಂಗ್‌ಲಾಟ್‌ವರೆಗೆ ಬಂದಿದ್ದವನು, ‘ನಿಮ್ಮಮ್ಮ ಸೂಳೆ... ಎಷ್ಟು ಜನಕ್ಕೆ ಹುಟ್ಟಿಸಿಕೊಂಡಿದ್ದಾಳೋ ನಿನ್ನನ್ನ... ನಿಮ್ಮಪ್ಪನೂ ಸೂಳೆಮಗ... ಗಂಡನ್ನ ಬಿಟ್ಟಿದ್ದೀಯಲ್ಲ ನೀನೂ ನಿಮ್ಮಪ್ಪನ ಜತೆ ಮಲೀಕಂತೀಯೇನೋ, ನೀನೂ ಸೂಳೆ...’ ಎಂದು ಬಾಯಿಗೆ ಬಂದಂತೆ ಅವಾಚ್ಯ ಪದಗಳಿಂದ ಬೈದ. ತಲೆಕೂದಲನ್ನು ಕಿತ್ತುಕೊಳ್ಳುತ್ತ ನೆಲದ ಮೇಲೆಲ್ಲ ಬಿದ್ದು ಒದ್ದಾಡಲಾರಂಭಿಸಿದ. ನನಗೆ ಅವನು ನಿಜಕ್ಕೂ ಹುಚ್ಚನಾಗಿಯೇ ಹೋದನೇನೋ ಎಂದು ಭಯವಾಯಿತು.

ಇನ್ನೂ ನಾನು ಅಲ್ಲಿಯೇ ಇದ್ದರೆ ಅವನ ಹುಚ್ಚು ಇನ್ನೂ ಹೆಚ್ಚಾಗಬಹುದೆನ್ನಿಸಿತು. ನಾನು ದೂರ ಹೋಗಿ ನಿಂತೆ. ಸಲೀಸಾಗಿ ಎದ್ದು ವಾಶ್‌ರೂಮಿನತ್ತ ನಡೆದ. ಅಂದರೆ, ಹುಚ್ಚನಂತೆ ನಟಿಸಿದನೋ, ಅಥವಾ ನಿಜಕ್ಕೂ ಹುಚ್ಚನೋ... ಒಂದೂ ಅರ್ಥವಾಗಲಿಲ್ಲ.

ಮನೆಗೆ ಬರುವ ವೇಳೆಗೆ ಶ್ರೀಮಂತ ಕುಟುಂಬವೊಂದರ ಪ್ರಸ್ತಾಪವನ್ನು ಅಮ್ಮ ತಂದಿದ್ದಳು. ಜೋಯಿಸರು ‘ಇವನಿಗೆ ಡೈವೋರ್ಸ್ ನೀಡಿ, ಆ ಹುಡುಗನನ್ನು ವರಿಸು. ನೀನು ಸದಾ ಖುಷಿಖುಷಿಯಾಗಿರಬೇಕು... ಜೀವನ ಇರುವುದೇ ಖುಷಿಪಡುವುದಕ್ಕೆ, ಹೀಗೆ ದುಃಖ ಪಡುವುದಕ್ಕಲ್ಲ... ಮೊದಲನೇ ಮದುವೆಗೆಂದು ಹುಡುಕಿದ್ದರೂ ಇಷ್ಟು ಒಳ್ಳೆಯ ಸಂಬಂಧ ಸಿಗುತ್ತಿರಲಿಲ್ಲ, ಅಂಥ ಸಂಬಂಧ ಹುಡುಕಿದ್ದೀನಿ... ಅಷ್ಟು ಒಳ್ಳೆ ಜನ, ಒಳ್ಳೆ ಕುಟುಂಬ... ಜಾತಕ ಎಷ್ಟು ಚೆನ್ನಾಗಿ ಕೂಡಿಬಂದಿದೆ ಗೊತ್ತಾ?...’ ಎಂದು ಹೇಳುತ್ತಿದ್ದರೆ, ಅವ್ಯಾವುವೂ ನನ್ನ ಮನಸ್ಸಿನೊಳಕ್ಕೇ ಹೋಗುತ್ತಿರಲಿಲ್ಲ. ನನ್ನ ಮನಸ್ಸಿನ ತುಂಬಾ ಅವನೇ ತುಂಬಿಕೊಂಡಿದ್ದ. ಅವನು ನನ್ನ ಪಾಲಿನ ಅವಿಭಾಜ್ಯ ಅಂಗ ಅನ್ನಿಸಲಾರಂಭಿಸಿದ್ದ. ಆದರೆ ಅವನ ಮಾತುಗಳು ಎಷ್ಟೊಂದು ಹರಿತವಾಗಿದ್ದವು. ಅವನೆಂದಂತೆ ಇನ್ನೊಂದು ಮದುವೆಯಾದರೆ ನಾನೂ ಸೂಳೆಯಾದಂತೆಯೇ? ಘನತೆವೆತ್ತ ನನ್ನ ಕುಟುಂಬವನ್ನೂ ಅವನ ಕುಟುಂಬದಂತೆಯೇ ಭಾವಿಸಿಬಿಟ್ಟನೇ? ಅವನ ಯೋಗ್ಯತಾನುಸಾರ ಅವನು ಯೋಚಿಸಿದ್ದಾನೆ. ಪಾಪ, ಅದರಲ್ಲಿ ಅವನದೇನು ತಪ್ಪು? ನಾವು ಆಯ್ಕೆ ಮಾಡಿಕೊಳ್ಳುವಾಗ ಅವನ ಹಿನ್ನೆಲೆ, ಮುನ್ನೆಲೆಗಳನ್ನೆಲ್ಲ ಚೆನ್ನಾಗಿ ವಿಚಾರಿಸಿಕೊಳ್ಳಬೇಕಾಗಿತ್ತು. ಬರೀ ಬಾಹ್ಯ ಸೌಂದರ್ಯ, ದುಡಿಮೆಯನ್ನಷ್ಟೇ ನೋಡಿ ಒಪ್ಪಿಕೊಳ್ಳಬಾರದಾಗಿತ್ತು...

ನನ್ನ ರೂಮಿಗೆ ಹೋಗಿ ಹಾಸಿಗೆ ಮೇಲೆ ಅಂಗಾತ ಮಲಗಿದೆ. ಏನೇ ಆದರೂ, ಎಷ್ಟೇ ಸ್ತ್ರೀಸ್ವಾತಂತ್ರ್ಯ, ಸಮಾನತೆ ಎಂದರೂ ಹೆಣ್ಣುಮಕ್ಕಳು ಬದುಕಲು ಇನ್ನೂ ಕಾಲ ಪಕ್ವಗೊಂಡಿಲ್ಲ ಅನ್ನಿಸಿತು. ಇನ್ನೊಂದು ನೂರುವರ್ಷ ಬಿಟ್ಟಾದರೂ ಹುಟ್ಟಬಾರದಾಗಿತ್ತೇ ಎಂದು ಹಪಾಹಪಿಸಿದೆ. ಮೂರು ವರ್ಷದ ನನ್ನ ದಾಂಪತ್ಯ ಜೀವನದ ಅಕರಾಳ ವಿಕರಾಳಗಳೆಲ್ಲ ಸುರುಳಿಸುರುಳಿಯಾಗಿ ಸಿನೆಮಾದಂತೆ ಕಣ್ಣುಮುಂದೆ ಸರಿದುಹೋಗಲಾರಂಭಿಸಿದವು. ಪ್ರತಿಯೊಂದು ಘಟನೆಯ ಪ್ರತಿಯೊಂದು ದಿನಾಂಕವೂ ನನ್ನ ನೆನಪಿನಲ್ಲಿತ್ತು...

ನಾಳೆಗೆ ಸರಿಯಾಗಿ ಮದುವೆಯಾದ ಮೂರನೇ ವರ್ಷ. ಎಲ್ಲಾ ಚೆನ್ನಾಗಿದ್ದರೆ ಸಂಭ್ರಮದ ಆ್ಯನಿವರ್ಸರಿ ಆಗಬೇಕಿತ್ತು. ಇಷ್ಟರಲ್ಲಿ ಕೈಯಲ್ಲೊಂದು ಮಗುವೂ ಇರಬೇಕಿತ್ತು. ಆದರೆ ನನ್ನ ಪಾಲಿನ ದುರ್ವಿಧಿ ನನ್ನ ವಿರುದ್ಧವಾಗಿ ಚಲಿಸುತ್ತಿರುವಾಗ ನಾನಾದರೂ ಏನು ಮಾಡಲು ಸಾಧ್ಯ? ನಮಗೆ ಬೇಕಾದಂತೆ ರೂಪಿಸಿಕೊಳ್ಳಲು ಈ ಜೀವನವೆನ್ನುವುದು ನಮ್ಮೊಬ್ಬರ ಕೈಯ್ಯಲ್ಲಷ್ಟೇ ಇಲ್ಲವಲ್ಲ. ಎಲ್ಲರೂ ಸೇರಿ ಚಪ್ಪಾಳೆ ತಟ್ಟಿದರೆ ಮಾತ್ರ ಬದುಕು ಸುಖಮಯ, ಇಲ್ಲವಾದರೆ ನರಕ ಎನ್ನಿಸಿತು.

ಮಾಡಿನಲ್ಲಿ ಸುತ್ತುತ್ತಿದ್ದ ಫ್ಯಾನ್ ನನ್ನನ್ನು ಆಕರ್ಷಿಸಿತು. ಗರಗರನೆ ಸುತ್ತುವ ಅದನ್ನು ನಿಲ್ಲಿಸಿ, ಅದಕ್ಕೂ ನನ್ನ ಕುತ್ತಿಗೆಗೂ ಸಂಪರ್ಕವೊಂದನ್ನು ಏರ್ಪಡಿಸಿಬಿಟ್ಟರೆ ಸಾಕು, ಈ ದೇಹಕ್ಕೂ ಉಸಿರಿಗೂ ಇರುವ ಸಂಬಂಧ ಕಡಿದುಹೋಗುತ್ತದೆ. ಈ ಎಲ್ಲ ಆಪಾದನೆಗಳಿಂದ, ನೋವುಗಳಿಂದ ಮುಕ್ತಿ ಸಿಗುತ್ತದೆ ಅನ್ನಿಸಿತು... ಸತ್ತಮೇಲೂ ನನ್ನ ಮೈಯನ್ನು ಯಾರೂ ಕಾಮದೃಷ್ಟಿಯಿಂದ ನೋಡಬಾರದೆಂದು ಎರಡೆರಡು ಬಟ್ಟೆ ಹಾಕಿಕೊಂಡೆ. ಕೈಗೆ ಸಿಕ್ಕ ಪೇಪರ್ರು–ಪೆನ್ಸಿಲ್ಲಿನಲ್ಲಿ, ‘ನನ್ನ ಸಾವಿಗೆ ನಾನೇ ಕಾರಣ. ದಯವಿಟ್ಟು ಯಾರೂ ಕಟ್ಟುಕಥೆ ಕಟ್ಟಬೇಡಿ...’ ಎಂದು ಬರೆದಿಟ್ಟೆ.

ಹೊರಗೆ ಮಳೆಯ ಮೋಡ ದಟ್ಟೈಸಿ ಕೊಠಡಿಯೆಲ್ಲ ಕತ್ತಲಾಗಿತ್ತು. ಎದ್ದೆ. ಕೈಗೆ ಸಿಕ್ಕ ಸೀರೆಯಿಂದ ಕುತ್ತಿಗೆಗೆ ಮೂರು ಗಂಟು ಹಾಕಿಕೊಂಡೆ. ಇವೇ ಮೂರು ಗಂಟನ್ನಲ್ಲವೇ ಅವನು ತಾಳಿಯ ಜೊತೆ ಹಾಕಿದ್ದು? ಮೇಲಿನ ಫ್ಯಾನಿಗೆ ಗಂಟು ಹಾಕಲು ನೋಡಿದೆ. ನನಗೆ ಗಂಟುಬಿಗಿಯಲೂ ಬರುವುದಿಲ್ಲ. ಇಂಟರ್ನೆಟ್‌ಲ್ಲಿ ಪರಿಶೀಲಿಸಿದೆ. ಸಾಯಲು ಹತ್ತಾರು ದಾರಿಗಳಿದ್ದವು...

ಹೊರಗೆ ರಪರಪನೆ ಮಳೆ ಜಡಿಯುತ್ತಿತ್ತು... ಹೆಪ್ಪುಗಟ್ಟಿದ್ದ ಮೋಡ ಮತ್ತೆ ಮತ್ತೆ ಆರ್ಭಟಿಸಿ ಕರಗಿ ನೀರಾಗಿಹೋಗುತ್ತಿತ್ತು...

ಪ್ರೀತಿ ಪಡೆದುಕೊಳ್ಳಲೂ ಯೋಗ್ಯತೆಯಿಲ್ಲದವನಿಗೋಸ್ಕರ ನಾನೇಕೆ ನನ್ನ ಜೀವವನ್ನು ಕೊಡಬೇಕು? ಇಲ್ಲ, ನಾನು ಸಾಯಕೂಡದು. ಬದುಕಿ ತೋರಿಸಬೇಕು. ತೋರಿಸುತ್ತೇನೆ... ಸೀರೆಯನ್ನು ಕುತ್ತಿಗೆಯಿಂದ ಕಿತ್ತೊಗೆದೆ. ಮರಣಪತ್ರವನ್ನು ಹರಿದು ಚೂರುಚೂರು ಮಾಡಿದೆ. ಕೊಠಡಿಯಿಂದ ಹೊರಬಂದೆ. ಪ್ರಪಂಚವೆಲ್ಲ ಹೊಸಹೊಸತರಂತೆ ಕಾಣಲಾರಂಭಿಸಿತು... ಮಳೆನಿಂತ ಕುರುಹಾಗಿ ಹೊಸಬೆಳಕೂ ಕೊಠಡಿಯನ್ನೆಲ್ಲ ಆವರಿಸಿತು...

‘ಇರುವುದೊಂದೇ ಜೀವ... ಅದನ್ನು ಕಳೆದುಕೊಳ್ಳಬಾರದು...’ ಎಂಬ ಡಾ. ಸಂಧ್ಯಾ ಅವರ ಮಾತು ಮತ್ತೆ ಮತ್ತೆ ಕಿವಿಯಲ್ಲಿ ಅನುರಣಿಸುತ್ತಿತ್ತು...

**ಪ್ರತಿಕ್ರಿಯಿಸಿ: feedback@sudha.co.in**